ದಿ: **11.01.2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು: ಶ್ರೀ ಪಿ.ಎಸ್.ಜಿ ವಕೀಲರಿಂದ**

1 ನೇ ಪ್ರತಿವಾದಿ 1985 ನೇ ಇಸವಿಯಿಂದ ಗುಂಡ್ಲುಪೇಟೆಯಲ್ಲಿ ವಾಸವಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಗಣಪತಿ ದೇವಸ್ಥಾನದಲ್ಲಿ ಪೂಜೆ ಮಾಡುತ್ತಾರೆ ಮತ್ತು ಬಟ್ಟೆ ವ್ಯಾಪಾರ ಮಾಡುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಸ್ವಂತ ಊರು ಕಂದೇಗಾಲದ ಹೊಸಹಳ್ಳಿಯ ಹೊಸೂರು ಎಂದರೆ ಸರಿ. ನನ್ನ ತಂದೆ ಚಂದ್ರಪ್ಪ ಹೊಸೂರಿನವರು ಎಂದರೆ ಸರಿ. ದಾವಾ ಐಟಂ ನಂ. 2 ನನ್ನ ತಂದೆಗೆ ಸೇರಿದ್ದು. ನನ್ನ ತಂದೆಗೆ ಸೇರಿದ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ತಂದೆಗೆ ಪುಟ್ಟಸ್ವಾಮಪ್ಪ ಹಿರಿಯ ಮಗ, 1 ನೇ ಪ್ರತಿವಾದಿ ಕಿರಿಯ ಮಗ ಎಂದರೆ ಸರಿ. ಪುಟ್ಟಸ್ವಾಮಪ್ಪನ ಮಗನ ಹೆಸರು ಮಲ್ಲಣ್ಣ ಎಂದು ಬರೆಸಿರುವ ವ್ಯಕ್ತಿ ಸುರೇಶ ಎಂದರೆ ಸರಿ. ರಾಣಿ ಸುರೇಶನ ಹೆಂಡತಿ ಎಂದರೆ ಸರಿ. ಪುಟ್ಟಸ್ವಾಮಪ್ಪ ತೀರಿಕೊಂಡು 30 ವರ್ಷಗಳಾಗಿದೆ, ಸರಿಯಾಗಿ ಗೊತ್ತಿಲ್ಲ. ಅವರು ತೀರಿಕೊಳ್ಳುವ ಮೊದಲು ನಾಗರಾಜಪ್ಪ ಮತ್ತು ಪುಟ್ಟಸ್ವಾಮಪ್ಪ ಬೇರೆ – ಬೇರೆ ಜೀವನ ಮಾಡುತ್ತಿದ್ದರು ಎಂದರೆ ಇಲ್ಲ – ಇಲ್ಲ ಎಂದು ನುಡಿಯುತ್ತಾರೆ. ಪುಟ್ಟಸ್ವಾಮಪ್ಪ ತೀರಿಕೊಳ್ಳುವ ಮೊದಲು ನಾಗರಾಜಪ್ಪ ಮತ್ತು ಪುಟ್ಟಸ್ವಾಮಪ್ಪ ಇಬ್ಬರೂ ಬೇರೆ – ಬೇರೆ ಹಣಕಾಸಿನ ವ್ಯವಹಾರ ಮಾಡುತ್ತಿದ್ದರು ಎಂದರೆ ಗೊತ್ತಿಲ್ಲ.

ಚಂದ್ರಪ್ಪನಿಗೆ 12 ಅಂಕಣ ಮನೆ ಗ್ರಾಮದಲ್ಲಿ ಇದೆ ಎಂದರೆ ಸರಿ. ಪುಟ್ಟಸ್ವಾಮಪ್ಪ ಮತ್ತು ನಾಗರಾಜಪ್ಪ 2 ಎಕರೆ 10 ½ , 2 ಎಕರೆ 10 ½ ಗುಂಟೆ ಪ್ರತ್ಯೇಕ – ಪ್ರತ್ಯೇಕ ಖಾತೆ ಮಾಡಿಕೊಂಡಿದ್ದಾರೆ ಎಂದರೆ ಅದು ಯಾವಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ, ಮೋಸದಿಂದ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 1989 ರಲ್ಲಿ ಪುಟ್ಟಸ್ವಾಮಪ್ಪ ಮತ್ತು ನಾಗರಾಜಪ್ಪ ಆಸ್ತಿಗಳನ್ನು ಬೇರೆ – ಬೇರೆ ಭಾಗ ಮಾಡಿಕೊಂಡರು ಎಂದರೆ ಸಾಕ್ಷಿಯು ಇಲ್ಲ ಎಂದು ಎಂದು ನುಡಿಯುತ್ತಾರೆ. ಅದೇ ರೀತಿ ಐಟಂ ನಂ. 1 ರಲ್ಲಿ 2 ಎಕರೆ 10 ½, 2 ಎಕರೆ 10 ½ ಗುಂಟೆ ಸಮಪಾಲು ಬಂದಿದೆ ಮತ್ತು ಮನೆ ಕೂಡ ಬೇರೆ – ಬೇರೆ ಮಾಡಿಕೊಂಡು ವಾಸವಿದ್ದಾರೆ ಎಂದರೆ ಸಾಕ್ಷಿಯು ಮನೆ ಮಾಡಿಕೊಂಡು ಬೇರೆ ವಾಸವಿದ್ದಾರೆ ಆದರೆ ವಿಭಾಗವಾಗಿಲ್ಲ ಎಂದು ನುಡಿಯುತ್ತಾರೆ.

ಓಎಸ್ 233/2021

ಪಿಡಬ್ಲ್ಯೂ–1

1 ನೇ ಪ್ರತಿವಾದಿಯು ಬಟ್ಟೆ ವ್ಯಾಪಾರ ಮತ್ತು ಗಣಪತಿ ದೇವಸ್ಥಾನ ಪೂಜೆ ಮಾಡಿಕೊಂಡು ದಾವಾ ಐಟಂ ನಂ. 2 ರ ಆಸ್ತಿಯನ್ನು 23.12.1997 ರಲ್ಲಿ ಸ್ವಯಾರ್ಜಿತವಾಗಿ ಕೊಂಡುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ರೀತಿ ಪುಟ್ಟಸ್ವಾಮಪ್ಪನ ಹೆಂಡತಿ ಮಕ್ಕಳು ತೊಂದರೆ ಕೊಟ್ಟ ಕಾರಣ 1 ನೇ ಪ್ರತಿವಾದಿಯು ಐಟಂ ನಂ. 1 ರ ಮೇಲೆ ಓಎಸ್ 85/2001 ರಂತೆ ಇದೇ ನ್ಯಾಯಾಲಯದಲ್ಲಿ ದಾವಾ ಹಾಕಿದ್ದರು ಅದು ತೀರ್ಮಾನವಾಗಿದೆ ಎಂದರೆ ಸರಿಯಲ್ಲ. ನಾಗರಾಜಪ್ಪ ದಾವಾ ಹಾಕಿರುವ ವಿಚಾರ ಗೊತ್ತಾ ಎಂದರೆ ಸಾಕ್ಷಿಯು ಉತ್ತರ ನೀಡಿರುವುದಿಲ್ಲ.

ಈ ವೇಳೆಯಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ